THE MYSORE LEGISLATIVE ASSEMBLY.

FOURTH DAY.

Thursday, 23*rd October* 1952.

The House met in the Assembly Hall, Old Public Offices, Bangalore, at Twelve of the Clock.

Mr. SPEAKER (Sri H. Siddaiya, B.A., LL.B.) in the Chair.

QUESTIONS AND ANSWERS.

Extention of Prohibition in the State.

Q.—134. **Sri G. A. THIMMAPPA GOWDA** (Arkalgud).—

Will the Government be pleased to state:—

(*a*) whether they intend to extend prohibition to the entire State and in what period;

(*b*) whether they are aware that some of the neighbouring States have introduced prohibition successfully throughout their States?

A.—**Sri Kadidal MANJAPPA** (Minister for Revenue and Public Works).—

(*a*) No.

Government would like to have the results of prohibition assessed properly before extending the scheme to all the other parts of the State.

(*b*) Government have no information.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಪಾನನಿರೋಧವನ್ನು ನಮ್ಮ ಮೈಸೂರು ಸೀಮೆಯಲ್ಲಿ ಜಾರಿಗೆ ತಂದದ್ದು ಯಾವಾಗ ಸ್ವಾಮಿ?

*ಶ್ರೀ ಟಿ. ಚನ್ನಯ್ಯ.—ನೋಟೀಸ್. ಬಹುಶಃ 1948-49 ರಲ್ಲಿ ಇರಬಹುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅಗಿನಿಂದ ಈ ತಹರವರೆಗೆ ಈಗ ಎಲ್ಲೆಲ್ಲಿ ಈ ಪಾನನಿರೋಧ ಪದ್ಧತಿಯನ್ನು ಜಾರಿಗೆ ತಂದಿರಲಾಗಿರುತ್ತದೆಯೋ ಅದರ ಅನುಭವದ ಮೇಲೆ ಇದು ಎಷ್ಟರಮಟ್ಟಿಗೆ ಮುಂದೆ ದೇಶದಲ್ಲಿ ಫಲಕಾರಿಯಾಗಿ ನಿಲ್ಲಬಹುದೆಂಬ ಬಗ್ಗೆ ಸರ್ಕಾರದವರು ಏನಾದರೂ ಸರ್ವೆ ನಡೆಸಿರುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ಆ ಸ್ಥಳಗಳಲ್ಲೆಲ್ಲಾ ಪ್ರೊಹಿಬಿಷನ್ ಎಷ್ಟರಮಟ್ಟಿಗೆ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆಯೆಂಬ ಬಗ್ಗೆ ಸರ್ಕಾರದವರು ಇಲ್ಲಿಯವರೆಗೂ ಇನ್ನೂ ಅಂಕಅಂಶಗಳನ್ನು ಶೇಖರಣೆ ಮಾಡುತ್ತಲೇ ಇರುತ್ತಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗೆ ಇಲ್ಲಿಯವರೆಗೆ ತಾವು ಯಾವ ಯಾವ ಜಿಲ್ಲೆಗಳವರಿಂದ ಈ ಬಗ್ಗೆ ವರದಿಗಳನ್ನು ತರಿಸಿಕೊಂಡಿದ್ದೀರಿ?

ಶ್ರೀ ಟಿ. ಚನ್ನಯ್ಯ.—ವರದಿಯನ್ನು ತರಿಸಿಕೊಳ್ಳುತ್ತಿದ್ದೇವೆ. ಆಯಾ ಜಿಲ್ಲೆಯಲ್ಲಿ ನೇಮಕ ಮಾಡಲಾಗಿರುವ ಪ್ರೊಹಿಬಿಷನ್ ಸಮಿತಿಯವರು ಅವರ ಸಲಹೆ ಮತ್ತು ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಕ್ರಮವಾಗಿ ಕಳುಹಿಸಿಕೊಡುತ್ತಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅಜುಬಾಜು ಪ್ರಾಂತಗಳಲ್ಲಿ ಈ ಪಾನನಿರೋಧ ಪದ್ಧತಿಯು ತಾವು ಈ ಅಧಿಕಾರಕ್ಕೆ ಬರುವ ಮುಂಚೆಯೇ ಎಂದರೆ ಮದರಾಸು ಮತ್ತು ಬೊಂಬಾಯಿ ಪ್ರಾಂತಗಳಲ್ಲಿ ಇದ್ದ ಸಂಗತಿ ತಮಗೆ ಗೊತ್ತಿರುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಗೊತ್ತಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗಿದ್ದರೆ ಉತ್ತರದಲ್ಲಿ 'ಇಲ್ಲ' ಎಂದು ಏತಕ್ಕೆ ಹೇಳಿದೆ?

ಶ್ರೀ ಟಿ. ಚನ್ನಯ್ಯ.—ಜಾರಿಯಲ್ಲಿರತಕ್ಕ ಬಗ್ಗೆ 'ಇಲ್ಲ' ಎಂದು ಉತ್ತರ ಕೊಟ್ಟಿಲ್ಲ. ಆದರೆ ಅದು ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬ ವಿಚಾರದಲ್ಲಿ ಅನುಮಾನವಿರುವ ಪ್ರಯುಕ್ತ ಹಾಗೆ ತಿಳಿಸಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನೆರೆ ಹೊರೆ ಪ್ರಾಂತಗಳಲ್ಲಿ ಅದು ಯಶಸ್ವಿಯಾಗಿ ನಡೆಯುತ್ತಿದೆ ಅಥವಾ ಇಲ್ಲ ಎಂಬುದರ ಬಗ್ಗೆ ತಾವು ಮದ್ರಾಸ್ ಮತ್ತು ಬೊಂಬಾಯಿ ಸರ್ಕಾರದವರ ವರದಿಯನ್ನೇನಾದರೂ ತರಿಸಿಕೊಂಡಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಪಾನನಿರೋಧ ಪದ್ಧತಿಯನ್ನು ಅಜುಬಾಜು ಪ್ರಾಂತಗಳವರು ಸಂಪೂರ್ಣವಾಗಿ ಜಾರಿಗೆ ತಂದುದರಿಂದ ಅಲ್ಲಿ ಇದು ಜಯಪ್ರದವಾಗಿ ನಡೆಯುತ್ತಿರುವುದರಿಂದ ತಾವೂ ಹಾಗೆ ಮಾಡಲು ಏರ್ಪಾಡು ಮಾಡುವಿರಾ?

ಶ್ರೀ ಟಿ. ಚನ್ನಯ್ಯ.—ಈಗ ಇಂಡಿಯಾ ಸರ್ಕಾರದವರು ಹೈ ಪವರ್ ಕಮಿಟಿಯೆಂಬುದಾಗಿ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಆ ಸಮಿತಿಯವರು ಇದನ್ನು ಯಾವ ರೀತಿ ತೀರ್ಮಾನ ಮಾಡುತ್ತಾರೋ ಅದನ್ನು ನೋಡಿಕೊಂಡು ಮುಂದೇನು ಮಾಡಬೇಕೆಂಬುದನ್ನು ಆಲೋಚನೆ ಮಾಡುತ್ತೇವೆ.

*Asterisk indicates that the remarks or speeches have not been revised by the member concerned.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸಾರ್ವಜನಿಕರು ಈ ಪಾನನಿರೋಧವನ್ನು ಸಂಸ್ಥಾನಾದ್ಯಂತವೂ ಜಾರಿಗೆ ತರಬೇಕೆಂದು ಸರ್ಕಾರಕ್ಕೆ ಒತ್ತಾಯಪಡಿಸುತ್ತಿರುವುದರಿಂದ, ಸರ್ಕಾರದವರು ಇಲ್ಲಿಯವರೆಗೂ ಆ ಬಗ್ಗೆ ಒಂದು ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬ ತೀರ್ಮಾನಕ್ಕೆ ಬಂದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಇನ್ನೂ ಬಂದಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ತಾವು ಈ ಪದ್ಧತಿಯನ್ನು ಪಾರ್ಷಿಯಲ್ಲಾಗಿ ಎಂದರೆ ಅರ್ಧಮರ್ಧ ಮಾಡಿರುವುದರಿಂದ ಇದು ಯಶಸ್ವಿಯಾಗಿ ನಡೆಯಲು ಅತಂಕವುಂಟಾಗಿರುತ್ತದೆಯೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ?

Sri T. CHANNIAH.—It is obvious Sir. We have got partial prohibition in the State. It is rather difficult to say. We cannot exactly assess the successful results. ಅದು ಪರಿಣಾಮದಲ್ಲಿ ಏನಾಗಬಹುದೆಂಬುದನ್ನು ಈಗಲೇ ಹೇಳುವುದಕ್ಕೆ ಸರ್ಕಾರದವರಿಗೆ ಸಾಧ್ಯವಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ತಾವು ಹೇಳುವುದರ ಪ್ರಕಾರವೇ ಇದನ್ನು ಸಂಸ್ಥಾನಾದ್ಯಂತವೂ ಸಂಪೂರ್ಣವಾಗಿ ಜಾರಿಗೆ ತಂದಮೇಲೆ ಇದು ಜಯಪ್ರದವಾಗಿ ನಡೆಯುತ್ತಿದೆಯೇ, ಇಲ್ಲವೇ ಎಂಬುದನ್ನು ಕಂಡುಹಿಡಿಯಲು ಸರ್ಕಾರಕ್ಕೆ ಸುಲಭವಲ್ಲವೇ?

ಶ್ರೀ ಟಿ. ಚನ್ನಯ್ಯ.—ಒಳ್ಳೆಯ ಮಾರ್ಗವಾಗಿರಬಹುದೇನೋ ಇರಬಹುದು. ಆದರೆ ದೇಶದಲ್ಲಿ strong section of the opinion ಇದೆ. We are also in favour of removing the prohibition. ಆದ್ದರಿಂದ ಈಗಲೇ ಪೂರ್ತಿಯಾಗಿ ನಾವು ಏನನ್ನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಬಗ್ಗೆ ದೇಶದಲ್ಲರ ತಕ್ಕ ಜನರ ಅಂದರೆ ಸ್ತ್ರೀಯರ ಮತ್ತು ಪುರುಷರ ಅಭಿಪ್ರಾಯವೇನಿರುತ್ತದೆಯೆಂಬ ಬಗ್ಗೆ ತಾವು ಒಂದು ಪ್ಲೆಬಿಸ್ಸೈಟನ್ನು ತೆಗೆಯಲು ಏರ್ಪಾಡು ಮಾಡುವಿರಾ?

ಶ್ರೀ ಟಿ. ಚನ್ನಯ್ಯ.—ಆ ವಿಷಯವನ್ನು ನಾವು ಆಲೋಚನೆ ಮಾಡಿಲ್ಲ. ಆವಶ್ಯಕತೆ ಕಂಡು ಬಂದರೆ ಆಗ ಆಲೋಚನೆ ಮಾಡುತ್ತೇವೆ.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು-ಅನುಸೂಚಿತ ಜಾತಿಗಳು).—ಹಾಸನ ಜಿಲ್ಲೆಯಲ್ಲಿ ಈ ಪಾನನಿರೋಧವನ್ನು ಕೇವಲ 2 ತಾಲ್ಲೂಕುಗಳಲ್ಲಿ ಮಾತ್ರ ತಂದು ಉಳಿದ ತಾಲ್ಲೂಕುಗಳಲ್ಲಿ ಇನ್ನೂ ಜಾರಿಗೆ ತಾರದಿರಲು ಕಾರಣವೇನು ಸ್ವಾಮಿ?

ಶ್ರೀ ಟಿ. ಚನ್ನಯ್ಯ.—ಈ ಪ್ರೊಹಿಬಿಷನ್ ಪಾಲಸಿಯನ್ನು ನಾವು ಪಾರ್ಷಿಯಲ್ ಆಗಿಯೇ ಜಾರಿಗೆ ತರುತ್ತಿದ್ದೇವೆಂದೂ ಮತ್ತು ಆ ಜಿಲ್ಲೆಯಲ್ಲಿ ಮೊದಲು 2 ತಾಲ್ಲೂಕುಗಳಲ್ಲಿ ಮಾತ್ರ ತರಲಾಗುತ್ತದೆಯೆಂದೂ ಮೊದಲೇ ಹೇಳಿದ್ದೇವೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಹಾಗೆ ತಾವು ಉಳಿದ ಪ್ರದೇಶದಲ್ಲಿ ಕುಡಿತವನ್ನು ಇಟ್ಟಿರುವುದರಿಂದ, ಈ ಕುಡಿತ ತಪ್ಪಿಸಿರತಕ್ಕ ಎರಡು ತಾಲ್ಲೂಕುಗಳವರೂ ಅಲ್ಲಿಗೆ ಹೋಗಿ ಕುಡಿಯುತ್ತಿರುವ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಎಚ್. ಕೆ. ಸಿದ್ದಯ್ಯ.—ಹಾಸನ ಜಿಲ್ಲೆಯಲ್ಲಿ ಈ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರುವಿರಾ?

ಶ್ರೀ ಟಿ. ಚನ್ನಯ್ಯ.—ಈಗಲೇ ಯಾವುದನ್ನೂ ಹೇಳುವುದಕ್ಕಾಗುವುದಿಲ್ಲ.

Sri J. MOHAMED IMAM (Jagalur).—He has stated here that the results of the prohibition has to be assessed. Have they taken any steps to assess the results of the prohibition.

Sri T. CHANNIAH.—We have introduced only partial prohibition. Unless full prohibition is introduced in the State, it is not possible to assess.

Sri J. MOHAMED IMAM.—My question is different.

Sri T. CHANNIAH.—Yes, Sir. That is why we have appointed a Prohibition Committee in Dry districts. We are getting reports from them every now and then.

Sri J. MOHAMED IMAM.—Would the Government like to have the resuts of prohibition assessed?

ಶ್ರೀ ಟಿ. ಚನ್ನಯ್ಯ.—ಬೇರೆ ಇನ್ನಾವ agencyಯೂ ಇಲ್ಲ except the Govt. Agency which we have got now; *viz.*, that Deputy Commissioners to obtain reports. Thoso reports are based on the suggestions made by the prohibition committees.

ಶ್ರೀ ಜೆ. ಮಹಮದ್ ಇಮಾಂ.—ಅಸೆಸ್ ಮಾಡುವುದಕ್ಕೋಸ್ಕರವಾಗಿ ಇದುವರೆಗೆ ನೀವು ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳದೆ ಇರುವುದರಿಂದ ಬೇರೆ ಒಂದು ಸ್ವತಂತ್ರ ಸಮಿತಿಯನ್ನೇನಾದರೂ ನೇಮಕ ಮಾಡಿ ಅವರ ಮೂಲಕ ಈ ಪ್ರೊಹಿಬಿಷನ್ ಹೇಗೆ ನಡೆಯುತ್ತಿದೆಯೆಂಬುದನ್ನು ತಿಳಿದುಕೊಳ್ಳಲು ಸಾಧ್ಯವೇ?

Sri T. CHANNIAH.—Yes, Sir. Your suggestion will be considered.

ಶ್ರೀ ಜೆ. ಮಹಮದ್ ಇಮಾಂ.—ಈಗ ತಾವು ಹೇಳಲಾದ, ಎಂದರೆ, ಇಂಡಿಯಾ ಸರ್ಕಾರದವರಿಂದ ನೇಮಿಸಲ್ಪಟ್ಟಿರುವ ಹೈ ಪವರ್ ಸಮಿತಿಯವರು ಪ್ರತಿಯೊಂದು ಸಂಸ್ಥಾನಕ್ಕೂ ಬಂದು ಇದನ್ನು ವಿಮರ್ಶೆ ಮಾಡಿ ನೋಡಿಕೊಂಡು ಹೋಗುತ್ತಾರೇನು?

ಶ್ರೀ ಟಿ. ಚನ್ನಯ್ಯ.—ಅವರು ಹೀಗೆ ಮಾಡುತ್ತಾರೆಂಬುದನ್ನು ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜೆ. ಮಹಮದ್ ಇಮಾಂ.—ಅವರಿಂದ ಮೈಸೂರು ಸರ್ಕಾರಕ್ಕೆ ಏನಾದರೂ ಕಾರ್ಡಿಕ್ರೀಟ್ ಪ್ರಪೋಸಲ್ಸ್‌ಗಳು ಬಂದಿವೆಯೇ?

ಶ್ರೀ ಟಿ. ಚನ್ನಯ್ಯ.—ನಾನು ಆ ವಿಚಾರವನ್ನು ಪತ್ರಿಕೆಗಳಲ್ಲಿ ನೋಡಿರತಕ್ಕದ್ದು ಏನಾ ಅವರಿಂದ ನಮಗೆ ಯಾವುದೂ ಅಂಥ ಕಾರ್ಡಿಕ್ರೀಟ್ ಪ್ರಪೋಸಲ್ಸ್‌ಗಳು ಬಂದಿಲ್ಲ.

ಶ್ರೀ ಜೆ. ಮಹಮದ್ ಇಮಾಂ.—ಈ ಪ್ರೊಹಿಬಿಷನ್ನನ್ನು ಸೆಂಟ್ರಲ್ ಸಬ್‌ಜೆಕ್ಟನ್ನಾಗಿ ಪರಿಗಣಿಸಬೇಕೆಂಬ ಆರ್ಥ ಕೊಡುವ ನಲ ಕೆಗಳೇನಾದರೂ ತಮಗೆ ಬಂದಿವೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ಎಂ. ವಿ. ರಾಮರಾವ್ (ತುಮಕೂರು).—(ಎ) ಪ್ರಶ್ನೆಗೆ ಒದಗಿಸಿರುವ ಉತ್ತರದ ಅಭಿಪ್ರಾಯ ನೋಡಿದರೆ, ಈ ಪ್ರೊಹಿಬಿಷನ್ನನ್ನು ಇನ್ನು ಮುಂದೆ ಜಾರಿಗೆ ತರಬೇಕೆಂಬ ಉದ್ದೇಶ ಸರ್ಕಾರಕ್ಕಿರುವುದಿಲ್ಲ ವೆಂಬುದೇ ಈ ಉತ್ತರದ ಅಭಿಪ್ರಾಯವಲ್ಲವೆ ?

Sri T. CHANNIAH.—Government have not taken away final decision in the matter.

ಶ್ರೀ ಎಂ. ವಿ. ರಾಮರಾವ್.—ಈ high-power committee ಯನ್ನು ಎಲ್ಲ ಮತ್ತು ಯಾವಾಗ ತಾವು appoint ಮಾಡಿದ್ದೀರಿ ?

ಶ್ರೀ ಟಿ. ಚನ್ನಯ್ಯ.—ಆ ಸಮಿತಿಯನ್ನು ಅಪಾಯಿಂಟ್ ಮಾಡಿರುವುದು ನಾವಲ್ಲ. It is the Government of India that have appointed.

ಶ್ರೀ ಎಂ. ವಿ. ರಾಮರಾವ್.—ತಾವು ಹೇಳಿದಂಥ ಸಮಿತಿ ಎಲ್ಲಿಯಾಗಲಿ, ಎಂದರೆ ಯಾವ ಡ್ರೈ ಜಿಲ್ಲೆಯಲ್ಲಾಗಲಿ, ನೇಮಿಸಿರತಕ್ಕ ಬಗ್ಗೆ ಒಂದು ಉದಾಹರಣೆ ಕೊಡುವಿರಾ ?

ಶ್ರೀ ಟಿ. ಚನ್ನಯ್ಯ.—ಸಮಿತಿಗಳಿರುತ್ತವೆ.

ಶ್ರೀ ಎಂ. ವಿ. ರಾಮರಾವ್.—ಅವು ಎಲ್ಲೆಲ್ಲಿರುತ್ತವೆ ?

ಶ್ರೀ ಟಿ. ಚನ್ನಯ್ಯ.—ಎಲ್ಲಾ ಕಡೆಗಳಲ್ಲೂ ಇವೆ.

ಶ್ರೀ ಎಂ. ವಿ. ರಾಮರಾವ್.—ಹಾಗೆ ತಾವು ಯಾವ ಡ್ರೈ ಜಿಲ್ಲೆಯಲ್ಲೂ ನೇಮಕ ಮಾಡಿಲ್ಲ ಎಂದು ಹೇಳಿದರೆ ಅದನ್ನು ವಿಚಾರ ಮಾಡಲು ತಾವು ತಯಾರಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಜಿಲ್ಲಾಧಿಕಾರಿಗಳು ಆ ಸಮಿತಿಗಳ ಸಲಹೆಗಳನ್ನು ಶೇಖರಿಸಿಕೊಂಡು ಸರ್ಕಾರಕ್ಕೆ ವರದಿಯನ್ನು ಕಳುಹಿಸುತ್ತಿದ್ದಾರೆ. ಆದರೆ ಈ ವಿಚಾರದಲ್ಲಿ ಸರ್ಕಾರ ಇನ್ನೂ ಯಾವ ನಿರ್ಧಾರಕ್ಕೂ ಬಂದಿರುವುದಿಲ್ಲ.

ಶ್ರೀ ಎಂ. ವಿ. ರಾಮರಾವ್.—ಈಗ ಜಾರಿಗೆ ತಂದಿರತಕ್ಕ ಪ್ರೊಹಿಬಿಷನ್ನನ್ನೂ ಸಹ ತೆಗೆದು ಹಾಕಿ ಬಿಡಬೇಕೆಂಬ ಆಲೋಚನೆ ಏನಾದರೂ ಇದೆಯೇ ?

Sri T. CHANNIAH.—Government are unable to say anything in the matter Sir, at present.

ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಈಗ ಮಂತ್ರಿಗಳು ಕೊಟ್ಟ ಉತ್ತರದಲ್ಲಿ Government is unable to say ಎಂದು ಹೇಳಿರುವುದರಿಂದ, ಈ ವಿಚಾರದಲ್ಲಿ ಕಾರ್ಪೆಸ್ಟಿಟ್ಯೂಷನ್ನಲ್ಲಿ ಸರಿಯಾದ ತಿದ್ದುಪಡಿ ಮಾಡದ ಏನಾ ಇದನ್ನು ಹಿಂದಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ —ಬಂದಿದೆ.

ಶ್ರೀ ಎಂ. ಮಾದಯ್ಯ.—Government is unable ಎಂದು ಹೇಳಿರುವುದರಿಂದ.....

Mr. SPEAKER.—You are not only repeating the question but also arguing the case.

ಶ್ರೀ ಎಂ. ಮಾದಯ್ಯ.—ಎಲ್ಲೆಲ್ಲ ಪಾನನಿರೋಧ ಜಾರಿಯಲ್ಲಿದೆಯೋ ಆ ಅಕ್ಕಪಕ್ಕದಲ್ಲೇ ಪಾನನಿರೋಧ ಜಾರಿಯಲ್ಲಿಲ್ಲದ ಪ್ರಯುಕ್ತ ಉಂಟಾಗುತ್ತಿರುವ ತೊಂದರೆಗಳನ್ನು ನಿವಾರಣೆ ಮಾಡಬೇಕೆಂಬ ದೃಷ್ಟಿಯಿಂದಲಾದರೂ ಇದನ್ನು ಮುಂದುವರಿಸಬೇಕೆಂಬ ಅಭಿಪ್ರಾಯವಿದೆಯೇ ?

Sri T. CHANNIAH.—It will be examined Sir.

Mr. SPEAKER.—I may tell the House that just two days back, the Leader of the House has stated that the question has not yet been thoroughly examined and they are awaiting the result of the deliberations of the Committee at the Centre.

Restoration of Thimmannanayakanakere, Arkalgud Taluk.

Q.—138. Sri G. A. THIMMAPPA GOWDA (Arkalgud).—

Will the Government be pleased to state.—

(*a*) the total extent of wet lands ('Atchkat') under Thimmannanayakanakere' a major tank, situated between Kasaba- Mallipatna Hoblis of Arkalgud Taluk, Hassan District ;

(*b*) whether they are aware that the raiyats are urging for the restoration of this tank since several years ;

(*c*) the steps they have taken to restore this tank, whether any estimate has been prepared to restore this tank ?

A.—Sri Kadidal MANJAPPA.—(Minister for Revenue and public Works).—

(*a*) 194 acres and 34 guntas.

(*b*) and (*c*) No.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸ್ವಾಮಿ, ಈ ಕೆರೆಯ ಕೆಳಗೆ ನೂರಾರು ಎಕರೆ ಜಮೀನು ನೀರಿಲ್ಲದೆ ಪಾಳು ಬಿದ್ದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಕೆರೆಯ ಕೋಡಿ ಬ್ರೀಚ್ ಆಗಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ. It is a restored major tank and no proposals have come to get it restored.